ಗುಬ್ಬಿ ತಾಲ್ಲೂಕು ಭೂಸಾರ ಸಂರಕ್ಷಣ ಇಲಾಖೆಯ ಚಾರ್ಜ್ ಆಫೀಸ್ ಇಲ್ಲದೇ ಇರುವ ಬಗ್ಗೆ

೧೪೬೨(೧೩೩೫)ಶ್ರೀ ಎಸ್. ಶಿವನಂಜಪ್ಪ (ಗುಬ್ಬಿ):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ;

ಅ) ಗುಬ್ಬಿ ತಾಲ್ಲೂಕು ಭೂಸಾರ ಸಂರಕ್ಷಣಾ ಇಲಾಖೆಯ ಚಾರ್ಜ್ ಆಫೀಸ್ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸಿ. ಎಸ್. ಪುರ ಕೆರೆಯನ್ನು ನೀರಾವರಿ ಅಭಿವೃದ್ಧಿ ಪ್ರದೇಶವನ್ನಾಗಿ ಮಾಡಲು ರೈತರು ಮತ್ತು ಶಾಸಕರು ಒತ್ತಾಯ ತರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಅದರ ಮಂಜೂರಾತಿ ಬಗ್ಗೆ ಅಂದಾಜು ಪಟ್ಟಿ ಕಳುಹಿಸಿದ್ದು, ಮಂಜೂರಾತಿ ನೀಡದೇ ಇರುವುದಕ್ಕೆ ಕಾರಣವೇನು;

ಈ) ಹಾಗಾದರೆ ಅದಕ್ಕೆ ಯಾವಾಗ ಮಂಜೂರಾತಿ ನೀಡಲಾಗುವುದು?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು):-

ಅ) ಬಂದಿದೆ, ಅದಾಗ್ಯೂ ಗುಬ್ಬಿ ತಾಲ್ಲೂಕಿನಲ್ಲಿ ತಾತ್ಕಾಲಿಕ ಚಾರ್ಜ್ ಆಫೀಸ್ ಕಾರ್ಯನಿರ್ವಹಿಸುತ್ತಿದೆ.

ಆ) ಇಲ್ಲ.

ಇ) ಈ ಇಲಾಖೆಗೆ ಅಂದಾಜು ಪಟ್ಟಿ ಬಂದಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

೧೯೯೨-೯೩ನೇ ಸಾಲಿನಲ್ಲಿ ಪಶುವೈದ್ಯಕೀಯ ಕೇಂದ್ರಗಳನ್ನು ಪ್ರಾರಂಭಿಸುವ ಬಗ್ಗೆ

೧೪೬೪(೧೩೩೪)ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೯೨-೯೩ರ ಸಾಲಿನಲ್ಲಿ ಎಷ್ಟು ಪಶು ವೈದ್ಯಕೀಯ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು (ಸ್ಥಳವಾರು ವಿವರ ನೀಡುವುದು);

ಆ) ಈ ಕೆಂದ್ರಗಳನ್ನು ಪ್ರಾಂಭಿಸುವ ಸಂದರ್ಭದಲ್ಲಿ ಕಟ್ಟಡ ಹಾಗೂ ಅದಕ್ಕೆ ಬೇಕಾಗುವ ಸಿಬ್ಬಂದಿಗಳನ್ನು ಒದಗಿಸಲಾಗುವುದೇ

ಶ್ರೀ ಬಸವರಾಜ್ ಪಾಟೀಲ್ (ಪಶು ಸಂಗೋಪನಾ ಮತ್ತು ಪಶುವೈದ್ಯ ಸೇವಾ ಸಚಿವರು):-

ಅ) ಇನ್ನೂ ನಿರ್ಧರಿಸಬೇಕಾಗಿದೆ

ಆ) ಉದ್ಭವಿಸುವುದಿಲ್ಲ.

ಸ್ಮಶಾನ ಭೂಮಿಗಳ ಆರ್ಜಿ

೧೯೫೫(೧೫೩೫) ಶ್ರೀ ಕೆ. ಸಿದ್ದಯ್ಯ (ಸಂತೆಮಾರನಹಳ್ಳಿ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಸ್ಮಶಾನ ಭೂಮಿಗಾಗಿ ಬಹಳಷ್ಟು ಅರ್ಜಿಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಅದರಲ್ಲೂ ಪರಿಶಿಷ್ಟ ಜಾತಿಯವರಿಂದ;

ಆ) ಸ್ಮಶಾನ ಭೂಮಿ ಉದ್ದೇಶಕ್ಕಾಗಿ ಜಮೀನುಗಳನ್ನು ತುರ್ತುಗತಿಯಲ್ಲಿ ಭೂಸ್ವಾಧೀನ ಮಾಡಿಕೊಳ್ಳುವ ಬಗ್ಗೆ ಸಂಬಂಧಿಸಿದ ನಿಯಮಗಳನ್ನು ತಿದ್ದುಪಡಿ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ಹೌದು

ಆ) ಭೂ ಸ್ವಾಧೀನ ಕಾಯ್ದೆ ೧೯೯೪ರ ಕಲಂ ೧೩(೧)ರಡಿಯಲ್ಲಿ ಸ್ಮಶಾನಕ್ಕಾಗಿ ಜಮಿನುಗಳನ್ನು ಸ್ವಾಧೀನ ಮಾಡಿಕೊಳ್ಳುವ ಬಗ್ಗೆ ಅವಕಾಶವನ್ನು ಕಲ್ಪಿಸಲಾಗಿದೆ. ಆದಕಾರಣ ಸದರಿ ನಿಯಮಗಳಿಗೆ ತಿದ್ದುಪಡಿ ಮಾಡುವ ವಿಚಾರ ಉದ್ಭವಿಸುವುದಿಲ್ಲ.

ನೆಲಮಂಗಲ ಕ್ಷೇತ್ರದಲ್ಲಿ ಅರಣ್ಯ ಇಲಾಖೆಯವರು ಸಸಿಗಳನ್ನು ನೆಡಲಾಗಿರುವುದು

೧೯೯೬(೧೫೩೭)ಶ್ರೀ ಆಂಜನಮೂರ್ತಿ (ನೆಲಮಂಗಲ):- ಮಾನ್ಯ ರಾಜ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ಅರಣ್ಯ ಇಲಾಖೆಯಡಿಯಲ್ಲಿ ಎಷ್ಟು ಸಸಿಗಳನ್ನು ನೆಡಲಾಗಿದೆ;

ಆ) ಯಾವ ಯಾವ ಜಾತಿಯ ಸಸಿಗಳನ್ನು ನೆಡಲಾಗಿದೆ;

ಇ) ಇದಕ್ಕಾಗಿ ಎಷ್ಟು ಹಣ ಖರ್ಚಾಗಿದೆ?

ಈ) ಈ ಸಸಿಗಳ ಪೈಕಿ ಎಷ್ಟು ಸಸಿಗಳು ಉಳಿದಿವೆ;

ಉ) ಈ ವರ್ಷ ಅದಕ್ಕಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಶ್ರೀ ಈಟಿ ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):-

ಅ) ನೆಲಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ ೩ ವರ್ಷಗಳಲ್ಲಿ ಈ ಕೆಳಕಂಡಂತೆ ಸಸಿಗಳನ್ನು ನೆಡಲಾಗಿದೆ:

೧೯೯೯-೯೦ - ೪೬೦೦ ಸಸಿಗಳು

೧೯೯೦-೯೧ - ೫೬೦೯೬ ಸಸಿಗಳು

೧೯೯೧-೯೨ - ೧೬೬೦೦೦ ಸಸಿಗಳು

ಆ) ಈ ಕ್ಷೇತ್ರದಲ್ಲಿ ಸಿಸ್ಸು, ಗಾಳಿಮರ, ಹುಣಸೆ, ಹಿಪ್ಪೆ, ನೇರಳೆ, ಜಾಲಿ, ಮತ್ತಿ, ಫೆಲ್ಟೋಫಾರಂ, ಅಕೇಶಿಯಾ, ಬಿದಿರು, ಕರಿಜಾಲಿ, ಹೊಂಗೆ, ಹಲಸು, ಸೀಮೆ ತಂಗಡಿ, ಬನ್ನಿ